



ಸುದ್ದಿ ಸಂಚಯ

# ಪೊನ್ನಂಪೇಟೆ ಶ್ರೀರಾಮಕೃಷ್ಣ ಸೇವಾಶ್ರಮ ಆಸ್ಪತ್ರೆಯ ಅಮೃತ ಮಹೋತ್ಸವ ಸಮಾರಂಭ

**ಪೊ**ನ್ನಂಪೇಟೆ ರಾಮಕೃಷ್ಣ ಶಾರದಾಶ್ರಮದ ವೈದ್ಯಕೀಯ ಘಟಕವಾದ ಶ್ರೀರಾಮಕೃಷ್ಣ ಸೇವಾಶ್ರಮ ಆಸ್ಪತ್ರೆಯ ಅಮೃತ ಮಹೋತ್ಸವ ಸಮಾರಂಭವು ಮೂರು ದಿನಗಳ ಕಾರ್ಯಕ್ರಮಗಳೊಂದಿಗೆ 2018ರ ಮೇ 23 ರಿಂದ 25ರ ವರೆಗೆ ನಡೆಯಿತು. ಮಹೋತ್ಸವದ ಅಂಗವಾಗಿ ಆಸ್ಪತ್ರೆಯ ಪ್ರಕೃತಿ ಚಿಕಿತ್ಸಾ ವಿಭಾಗದ ಹೊಸ ಕಟ್ಟಡ **'ವಿವೇಕಾನಂದ ಆರೋಗ್ಯಧಾಮ'**ವು ಉದ್ಘಾಟಿಸಲ್ಪಟ್ಟಿತು. ಇದರೊಂದಿಗೆ **ಸಾರ್ವಜನಿಕ ಸಭೆ, ಉಚಿತ ಮಲ್ಟಿ ಸ್ಪೆಶಾಲಿಟಿ ವೈದ್ಯಕೀಯ ಶಿಬಿರ**, ಹಾಗೂ **ವೈದ್ಯಕೀಯ ವಿಚಾರ ಸಂಕಿರಣ** ನಡೆಯಿತು.

ರಾಮಕೃಷ್ಣ ಮಹಾಸಂಘದ ಉಪಾಧ್ಯಕ್ಷರಲ್ಲಿ ಒಬ್ಬರಾದ ಶ್ರೀಮತ್ ಸ್ವಾಮಿ ಸುಹಿತಾನಂದಜಿ ಮಹಾರಾಜ್ ಅವರ ದಿವ್ಯ ಸಾನ್ನಿಧ್ಯದಿಂದ ಈ ಸಮಾರಂಭವು ಪುನೀತವಾಯಿತು. ಮಹಾಸಂಘದ ಸಹಕಾರ್ಯದರ್ಶಿಗಳಲ್ಲಿ ಒಬ್ಬರಾದ ಪೂಜ್ಯ ಸ್ವಾಮಿ ಬೋಧಸಾರಾನಂದಜಿ ಈ ಕಾರ್ಯಕ್ರಮಗಳಲ್ಲಿ ಭಾಗವಹಿಸಿದರು. ಇದರೊಂದಿಗೆ ಬೆಂಗಳೂರು, ಲಕ್ನೋ, ಮುಂಬಯಿ, ಜಮ್ಮು, ಮೈಸೂರು, ತಿರುವನಂತಪುರ, ನಟ್ಟರಾಂಪಳ್ಳಿ, ಚೆನ್ನೈ, ಮತ್ತಿತರ ಶಾಖಾಕೇಂದ್ರಗಳಿಂದ ಬಂದು ಹಲವು ಮಂದಿ ಸ್ವಾಮೀಜಿಗಳು, ಸಮೀಪದ ಪ್ರದೇಶಗಳಿಂದ ಬಂದ ಭಕ್ತರುಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದರು.

**ಉದ್ಘಾಟನೆ: ೨೩ ಮೇ, ೨೦೧೮:** ಆಶ್ರಮದ ಶಾಂಭವಾನಂದ ಸಭಾಂಗಣದಲ್ಲಿ ನಡೆದ ಅಮೃತ ಮಹೋತ್ಸವ ಸಮಾರಂಭದ ಉದ್ಘಾಟನೆಯನ್ನು ಸ್ವಾಮಿ ಸುಹಿತಾನಂದಜಿಯವರು ನೆರವೇರಿಸಿದರು. ವೇದಿಕೆಯಲ್ಲಿ ಮೈಸೂರು ಮೆಡಿಕಲ್ ಕಾಲೇಜಿನ ಪ್ರತಿನಿಧಿಗಳು, ಸ್ವಾಮಿ ಆತ್ಮವಿದಾನಂದಜಿ (ವಿಶಾಖಪಟ್ಟಣಂ), ಸ್ವಾಮಿ ಮೋಕ್ಷವ್ರತಾನಂದಜಿ (ತಿರುವನಂತಪುರ), ಸ್ವಾಮಿ ನಿರಂತರಾನಂದಜಿ (ಜಮ್ಮು), ಸ್ವಾಮಿ ಸತ್ಯದೇವಾನಂದಜಿ (ಮುಂಬೈ), ಸ್ವಾಮಿ ಜಿತಕಾಮಾನಂದಜಿ (ಮಂಗಳೂರು), ವಿರಾಜಪೇಟೆಯ ಕಲಂಚೇರಿ ಮಠದ ಶ್ರೀ ಶಾಂತ ಮಲ್ಲಿಕಾರ್ಜುನ ಸ್ವಾಮೀಜಿಯವರು ಉಪಸ್ಥಿತರಿದ್ದರು. ಪೊನ್ನಂಪೇಟೆ ಫಾರೆಸ್ಟ್ರಿ ಕಾಲೇಜಿನ ವಿಭಾಗ ಮುಖ್ಯಸ್ಥರಾದ ಡಾ. ಸಿ.ಜಿ.ಕುಶಾಲಪ್ಪನವರು ಪೊನ್ನಂಪೇಟೆ ನಾಗರಿಕರ ಪರವಾಗಿ ಸ್ವಾಮಿ ಸುಹಿತಾನಂದಜಿಯವರಿಗೆ ಬಿನ್ನವತ್ತಳೆ ಸಲ್ಲಿಸಿದರು. ಸ್ವಾಮೀಜಿಯವರು ಸೇವಾಶ್ರಮ ಆಸ್ಪತ್ರೆಯ ಅವಿರತ ಸೇವೆಯನ್ನು ಶ್ಲಾಘಿಸಿ ಮಾತನಾಡಿದರು. ಇತರ ಸ್ವಾಮೀಜಿಗಳೂ ಕೂಡ ಈ ಸಂದರ್ಭದಲ್ಲಿ ಮಾತನಾಡಿದರು.

**ವಿವೇಕಾನಂದ ಆರೋಗ್ಯಧಾಮದ ಉದ್ಘಾಟನೆ: ೨೪ ಮೇ, ೨೦೧೮:** ಶ್ರೀರಾಮಕೃಷ್ಣರ ವಿಶೇಷ ಪೂಜೆ, ಹೋಮಗಳೊಂದಿಗೆ ಹೊಸ ಕಟ್ಟಡದ ಉದ್ಘಾಟನೆ ಆರಂಭಗೊಂಡಿತು. ವೇದಘೋಷಗಳ ಹಿನ್ನೆಲೆಯಲ್ಲಿ ಸ್ವಾಮಿ ಸುಹಿತಾನಂದಜಿಯವರು ಕಟ್ಟಡವನ್ನು ಉದ್ಘಾಟಿಸಿದರು. ಸ್ವಾಮಿ ಬೋಧಸಾರಾನಂದಜಿ ಕಟ್ಟಡದ ಮೊದಲನೇ ಮಹಡಿ 'ಕೊಕ್ಕಂಗಡ ಪೊನ್ನಪ್ಪ ಮತ್ತು ಪಾರ್ವತಿ ಬ್ಲಾಕ್'ಅನ್ನು ಉದ್ಘಾಟಿಸಿದರು.

ಪೂರ್ವಾಹ್ನ 11.00 ರ ಸುಮಾರಿಗೆ ಆಶ್ರಮದಲ್ಲಿ **ಸಾರ್ವಜನಿಕ ಸಭೆ** ನಡೆಯಿತು. ಸ್ವಾಮಿ ಬೋಧಸಾರಾನಂದಜಿಯವರು ಪ್ರಾಸ್ತಾವಿಕ ಭಾಷಣ ಮಾಡಿದರು. ಸ್ವಾಮಿ ಜಗದಾತ್ಮಾನಂದಜಿಯವರ ಭಾಷಣವನ್ನು ಓದಲಾಯಿತು. ಬಳಿಕ ಸ್ವಾಮಿ ಮುಕ್ತಿನಾಥಾನಂದಜಿ ಹಾಗೂ ಹಾಗೂ ರಾಘವೇಶಾನಂದಜಿ ಸಭಿಕರನ್ನು ಉದ್ದೇಶಿಸಿ ಮಾತನಾಡಿದರು. ಈ ಸಂದರ್ಭದಲ್ಲಿ ಕಟ್ಟಡ ನಿರ್ಮಾಣಕ್ಕೆ ನೆರವಾದ ದಾನಿಗಳು, ಇಂಜಿನಿಯರ್, ಇತರ ಕೆಲಸಗಾರರನ್ನು ಸನ್ಮಾನಿಸಲಾಯಿತು. ಕೊನೆಯಲ್ಲಿ ಸ್ವಾಮಿ ಸುಹಿತಾನಂದಜಿ ಮಹಾರಾಜ್ ಆಶೀರ್ವಚನ ನೀಡಿದರು.

**ದಿನಾಂಕ ೨೫ ಮೇ, ೨೦೧೮:** ಸ್ವಾಮಿ ಬೋಧಸಾರಾನಂದಜಿ ಅವರು **ಮಲ್ಟಿ ಸ್ಪೆಶಾಲಿಟಿ ವೈದ್ಯಕೀಯ ಶಿಬಿರ**ವನ್ನು ಉದ್ಘಾಟಿಸಿದರು. ಇದು ಈ ಸಂದರ್ಭಕ್ಕಾಗಿಯೇ ವಿಶೇಷವಾಗಿ ಆಯೋಜಿಸಿದ ಶಿಬಿರವಾಗಿತ್ತು. ಮೈಸೂರಿನ ನಾರಾಯಣ ಹೃದಯಾಲಯ, ಬೆಂಗಳೂರಿನ ಜೆ.ಎಸ್.ಎಸ್.ಮೆಡಿಕಲ್ ಕಾಲೇಜು ಮತ್ತು ಆಸ್ಪತ್ರೆ, ಬೆಂಗಳೂರಿನ ಶೇಖರ ನೇತ್ರ ಚಿಕಿತ್ಸಾಲಯ, ವಿರಾಜಪೇಟೆಯ ಕೂರ್ಗ್ ಇನ್‌ಸ್ಟಿಟ್ಯೂಟ್ ಆಫ್ ಡೆಂಟಲ್ ಸೈನ್ಸಸ್ ಈ ಸಂಸ್ಥೆಗಳಿಂದ ನುರಿತ ವೈದ್ಯರುಗಳು ಬಂದಿದ್ದರು. ಸ್ವಾಮಿ ಮುಕ್ತಿನಾಥಾನಂದಜಿಯವರು ವಿಚಾರ ಸಂಕಿರಣವನ್ನು ಉದ್ಘಾಟಿಸಿದರು. ಇದರಲ್ಲಿ ವಿವಿಧ ಕಾಲೇಜುಗಳಿಂದ ಬಂದ ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರು ಭಾಗವಹಿಸಿದ್ದರು.





Managing Editor : Swami Atmajnananda
Editor : Swami Jnanayogananda

Printed and Published by Swami Atmajnananda, on behalf of Sri Ramakrishna Ashrama, Yadavagiri, Mysore and Printed at Mayur Graphics, No.C-12, Industrial Estate, Rajaji Nagar, Bangalore -560 010 and published at Sri Ramakrishna Ashrama, Yadavagiri, Mysore -570 020